

بسم اللّٰہِ الرّحمٰن الرّحیم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **11–02–2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಚರಿತ್ರೆಯಲ್ಲಿ ಮಕ್ಕಾ ವಿಜಯಕ್ಕೆ ಸಂಬಂಧಿಸಿ ಹಝ್ರತ್ ಅಬೂಬಕರ್(ರ)ರ ಒಂದು ಕನಸಿನ ಪ್ರಸ್ತಾಪವಿದೆ. ಅದೇನೆಂದರೆ, ಮುಸ್ಲಿಮರು ಮಕ್ಕದ ಸಮೀಪಕ್ಕೆ ತಲುಪಿದರು. ಆಗೊಂದು ನಾಯಿ ಬೊಗಳುತ್ತಾ ಬಂತು. ಸಮೀಪಕ್ಕೆ ತಲುಪಿದ ಕೂಡಲೇ ಅದು ಅಂಗಾತ ಮಲಗಿತು. ಅದರ ಕೆಚ್ಚಲಿಂದ ಹಾಲು ಹರಿಯಲು ತೊಡಗಿತು. ಈ ಕನಸನ್ನು ವ್ಯಾಖ್ಯಾನಿಸುತ್ತಾ ಹಝ್ರತ್ ಪೈಗಂಬರ್(ಸ) ಹೇಳಿದರು: ಅವರ ಉಪದ್ರ ದೂರವಾಯಿತು ಮತ್ತು ಪ್ರಯೋಜನ ಸಮೀಪವಾಯಿತು. ಅವರು ನಿಮ್ಮ ಸಂಬಂಧ ಪ್ರಸ್ತಾಪಿಸುತ್ತಾ ನಿಮ್ಮ ಅಭಯದಲ್ಲಿ ಬರುವರು. ನೀವು ಅವರಲ್ಲಿ ಕೆಲವರನ್ನು ಭೇಟಿಯಾಗುವಿರಿ.

ಮಕ್ಕಾ ವಿಜಯಕ್ಕೆ ಮುಂಚೆ ಅಬೂಸುಫ್‌ಯಾನ್ ಮರುರ್ಝ್ಝುಹ್‌ರಾನ್ ಎಂಬಲ್ಲಿ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದಾಗ, ಹಝ್ರತ್ ಅಬ್ಬಾಸ್(ರ) ಅಥವಾ ಹಝ್ರತ್ ಅಬೂಬಕರ್(ರ)ರ ಸಲಹೆ ಪ್ರಕಾರ, ಮುಸ್ಲಿಮರ ಸೈನ್ಯವನ್ನು ನೋಡುವಂತಾಲು ಅಬೂಸುಫ್‌ಯಾನನ್ನು ತಡೆದು ನಿಲ್ಲಿಸಿದರು. ಅಬೂಸುಫ್‌ಯಾನಿನ ಮುಂದಿನಿಂದ ಮುಹಾಜಿರರು ಮತ್ತು ಅನ್ಸಾರರು ಒಳಗೊಂಡ ಹಸಿರು ಬಟ್ಟೆಗಳನ್ನು ಧರಿಸಿದ್ದ ಹಝ್ರತ್ ಪೈಗಂಬರ್(ಸ)ರ ಸೈನ್ಯ ಹಾದು ಹೋಯಿತು. ಒಂದು ಸಾವಿರ ಅನ್ಸಾರ್ ಸಹಾಬಿಯರು ಲೋಹದ ಯುದ್ಧ ಕವಚಗಳನ್ನು ಧರಿಸಿದ್ದರು. ಹಝ್ರತ್ ಪೈಗಂಬರ್(ಸ) ತನ್ನ ಧ್ವಜವನ್ನು ಹಝ್ರತ್ ಸಅದ್ ಬಿನ್ ಉಬಾದ(ರ)ರಿಗೆ ನೀಡಿದ್ದರು. ಅವರು ಸೈನ್ಯದ ಮುಂದೆ ಇದ್ದರು. ಹಝ್ರತ್ ಸಅದ್ ಬಿನ್ ಉಬಾದ(ರ) ಅಬೂಸುಫ್‌ಯಾನಿನ ಬಳಿಯಿಂದ ಸಾಗುತ್ತಿದ್ದಾಗ ಅವರನ್ನು ಕೆಣಕಿದರು. ಆಗ ಅಬೂಸುಫ್‌ಯಾನ್ ಹಝ್ರತ್ ಅಬ್ಬಾಸ್(ರ)ರೊಡನೆ ಹೇಳಿದರು: ಹೇ ಅಬ್ಬಾಸ್, ಇಂದು ನನ್ನ ಸಂರಕ್ಷಣೆಯ ಜವಾಬ್ದಾರಿ ನಿಮ್ಮದಾಗಿದೆ. ಅನಂತರ ಇತರ ಗೋತ್ರಗಳು ಅಲ್ಲಿಂದ ದಾಟಿ ಹೋದುವು. ಅನಂತರ ಹಝ್ರತ್ ಪೈಗಂಬರ್(ಸ) ಬಂದರು. ಅವರು ತನ್ನ ಖಸ್‌ವ ಎಂಬ ಒಂಟೆಯ ಮೇಲೆ ಸವಾರರಾಗಿದ್ದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಸೈದ್ ಬಿನ್ ಹಝೀರ್(ರ)ರ ನಡುವಿನಿಂದ ಅವರೊಡನೆ ಮಾತನಾಡುತ್ತಾ ನಡೆದು ಬರುತ್ತಿದ್ದರು. ಹಝ್ರತ್ ಅಬ್ಬಾಸ್(ರ) ಅಬೂಸುಫ್‌ಯಾನಿನೊಡನೆ ಹೇಳಿದರು: ಇವರೇ ರಸೂಲುಲಲ್ಲಾಹಿ ಸಲ್ಲಲ್ಲಾಹು ಅಲೈಹಿವಸಲ್ಲಮ್.

ಹಝ್ರತ್ ಪೈಗಂಬರ್(ಸ) ಮಕ್ಕದಲ್ಲಿ ಪ್ರವೇಶಿಸಿದಾಗ, ಮಹಿಳೆಯರು ಕುದುರೆಗಳ ಮುಖಗಳ ಮೇಲೆ ತಮ್ಮ ಹೊದಿಕೆಗಳಿಂದ ಹೊಡೆಯುತ್ತಾ ಅವುಗಳನ್ನು ಹಿಂದಕ್ಕೆ ಸರಿಸುತ್ತಿದ್ದುದನ್ನು ಕಂಡರು. ಹಝ್ರತ್ ಪೈಗಂಬರ್(ಸ) ಈ ದೃಶ್ಯವನ್ನು ಕಂಡಾಗ ಅವರು ಹಝ್ರತ್ ಅಬೂಬಕರ್(ರ)ರೊಡನೆ, ಹಸ್ಸಾನ್ ಬಿನ್ ಸಾಬಿತ್ ಈ ಕುರಿತು ಏನು ಹಾಡಿದ್ದರು ಎಂದು ಕೇಳಿದರು. ಆಗ ಪ್ರತಾಪಶಾಲಿಯಾದ ಒಂದು ಸೈನ್ಯ 'ಕದಾ'ದ ಮಾರ್ಗವಾಗಿ ಪ್ರವೇಶಿಸುವುದರ ಕುರಿತು ಇದೇ ರೀತಿಯ ದೃಶ್ಯದ ವಿವರಣೆಯನ್ನು ಹಝ್ರತ್ ಹಸ್ಸಾನ್ ಬಿನ್ ಸಾಬಿತ್ ತನ್ನ ಪದ್ಯದಲ್ಲಿ ಹಾಡಿದ್ದನ್ನು ಹಝ್ರತ್ ಅಬೂಬಕರ್(ರ) ಕೇಳಿಸಿದರು. ಹಾಗಾದರೆ ಹಸ್ಸಾನ್ ಬಿನ್ ಸಾಬಿತ್ ಹೇಳಿದ ಅದೇ ಪ್ರದೇಶದಿಂದ ಪ್ರವೇಶಿಸಲು ಹಝ್ರತ್ ಪೈಗಂಬರ್(ಸ) ಹೇಳಿದರು. ಕದಾ ಎಂಬುದು ಅರಫಾತಿನ ಮತ್ತೊಂದು ಹೆಸರಾಗಿದೆ.

ಮಕ್ಕಾ ವಿಜಯದ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಅಭಯದ ಘೋಷಣೆ ಮಾಡಿದರು. ಆಗ ಹಝ್ರತ್ ಅಬೂಬಕರ್(ರ) ಹೀಗೆ ಹೇಳಿದರು: ಅಬೂಸುಫ್‌ಯಾನ್ ಗೌರವವನ್ನು ಇಷ್ಟಪಡುತ್ತಾನೆ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಯಾರು ಅಬೂಸುಫ್‌ಯಾನಿನ ಮನೆಗೆ ಪ್ರವೇಶಿಸುವರೋ ಅವರು ಅಭಯದಲ್ಲಿ ಇರುವರು. ಹಝ್ರತ್ ಪೈಗಂಬರ್(ಸ)ರ ಆದೇಶ ಪ್ರಕಾರ ಹುಬುಲ್ ವಿಗ್ರಹವನ್ನು ಬೀಳಿಸಲಾದಾಗ ಹಝ್ರತ್ ಝುಬೇರ್ ಬಿನ್ ಅವಾಮ್(ರ) ಅಬೂಸುಫ್‌ಯಾನಿಗೆ ಹೀಗೆ ನೆನಪಿಸಿ ಕೊಟ್ಟರು: ಉಹದ್ ಯುದ್ಧದ ದಿನದಂದು ಇದೇ ವಿಗ್ರಹದ ಕುರಿತು, ಅದು ನಿಮ್ಮನ್ನು ಅನುಗ್ರಹಿಸಿತ್ತು ಎಂದು ನೀನು ಬಹಳ ಗರ್ವದಲ್ಲಿ ಘೋಷಿಸಿದ್ದೆ. ಆಗ ಅಬೂಸುಫ್‌ಯಾನ್ ಹೇಳಿದನು: ಆ ಮಾತುಗಳನ್ನು ಈಗ ಬಿಟ್ಟುಬಿಡು, ಹಝ್ರತ್ ಪೈಗಂಬರ್(ಸ)ರ ಅಲ್ಲಾಹನಲ್ಲದೆ ಬೇರೆ ದೇವನಿರುತ್ತಿದ್ದರೆ, ಇಂದು ಆದದ್ದು ಆಗುತ್ತಿರಲಿಲ್ಲವೆಂದು ನನಗೆ ಈಗ ಮನವರಿಕೆಯಾಗಿದೆ.

ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ: ಮಕ್ಕಾ ವಿಜಯದಂದು ಹಝ್ರತ್ ಪೈಗಂಬರ್(ಸ) ಕುಳಿತುಕೊಂಡಿದ್ದರು. ಹಝ್ರತ್ ಅಬೂಬಕರ್(ರ) ಖಡ್ಗವನ್ನು ಎತ್ತಿ ಸಂರಕ್ಷಣೆಗಾಗಿ ಹಝ್ರತ್ ಪೈಗಂಬರ್(ಸ)ರ ಸಮೀಪ ನಿಂತಿದ್ದರು.

ಹವಾಝುನ್ ಯುದ್ಧ, ಔತಾಸ್ ಯುದ್ಧ ಎಂಬೀ ಹೆಸರುಗಳಲ್ಲಿ ಕರೆಯಲಾಗುವ ಹುನೈನ್ ಯುದ್ಧವು ಹಿಜರಿ 8ರಲ್ಲಿ ಮಕ್ಕಾ ವಿಜಯದ ನಂತರ ನಡೆದಿತ್ತು. ಹುನೈನ್ ಎಂಬುದು ಮಕ್ಕ ಮತ್ತು ತಾಯಿಫಿನ ನಡುವೆ ಮಕ್ಕದಿಂದ 30 ಮೈಲುಗಳ ದೂರದಲ್ಲಿರುವ ಒಂದು ಕಣಿವೆಯ ಹೆಸರಾಗಿದೆ. ಮಕ್ಕಾ ವಿಜಯದ ಸುದ್ದಿ ಲಭಿಸಿದಾಗ ಮಾಲಿಕ್ ಬಿನ್ ಔಫ್ ನಸರೀ ಎಂಬವನ ಮನವಿ ಪ್ರಕಾರ ಅರೇಬಿಯದ ಒಂದು ದೊಡ್ಡ ಸೈನ್ಯ ಮುಸ್ಲಿಮರನ್ನು ಎದುರಿಸಲಿಕ್ಕಾಗಿ ತಯಾರಾಯಿತು. ಹಝ್ರತ್ ಪೈಗಂಬರ್(ಸ) 12 ಸಾವಿರ ಸೈನಿಕರೊಂದಿಗೆ ಅವರನ್ನು ಎದುರಿಸಲಿಕ್ಕಾಗಿ ಹೊರಟರು.

ಮುಂಜಾನೆ ಹುನೈನ್‌ಗೆ ತಲುಪಿದರು. ಮುಶ್ರಿಕರ ಸೈನ್ಯ ಮೊದಲೇ ಪರ್ವತಗಳಲ್ಲಿ ಅವಿತುಕೊಂಡಿತ್ತು. ಅವರು ಮುಸ್ಲಿಮರ ಮೇಲೆ ಎಷ್ಟು ಅಚಾನಕ್ಕಾಗಿ ಹಲ್ಲೆ ನಡೆಸಿದರು ಎಂದರೆ, ಮುಸ್ಲಿಮರಿಗೆ ಅದನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಆಗ ಹಝ್ರತ್ ಪೈಗಂಬರ್(ಸ)ರ ಬಳಿ ಕೇವಲ ಬೆರಳೆಣಿಕೆಯ ಸಹಾಬಿಯರು ಬಾಕಿಯುಳಿದಿದ್ದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹುನೈನ್ ಯುದ್ಧದ ಒಂದು ಸಮಯದಲ್ಲಿ ಹಝ್ರತ್ ಪೈಗಂಬರ್(ಸ)ರ ಸುತ್ತ ಕೇವಲ 12 ಸಹಾಬಿಯರು ಬಾಕಿಯುಳಿದಿದ್ದರು. ಹಝ್ರತ್ ಅಬೂಬಕರ್(ರ) ಗಾಬರಿಗೊಂಡು ಹಝ್ರತ್ ಪೈಗಂಬರ್(ಸ)ರ ಸವಾರಿಯ ಲಗಾಮನ್ನು ಹಿಡಿದರು ಮತ್ತು ಹೀಗೆ ಹೇಳಿದರು: ಯಾ ರಸೂಲುಲ್ಲಾಹ್, ಇದು ಮುಂದಕ್ಕೆ ಹೋಗಬೇಕಾದ ಸಮಯವಲ್ಲ. ಆದರೆ ಹಝ್ರತ್ ಪೈಗಂಬರ್(ಸ) ಬಹಳ ಆವೇಶದಿಂದ ಹೀಗೆ ಹೇಳಿದರು: ನನ್ನ ಸವಾರಿಯ ಲಗಾಮನ್ನು ಬಿಟ್ಟುಬಿಡಿರಿ. ಅನಂತರ ಹಝ್ರತ್ ಪೈಗಂಬರ್(ಸ) ಸವಾರಿಯನ್ನು ಓಡಿಸುತ್ತಾ ಮುಂದಕ್ಕೆ ಧಾವಿಸಿದರು. ಅವರು ಹೀಗೆ ಹೇಳುತ್ತಿದ್ದರು: ಯಾರ ಸಂರಕ್ಷಣೆಯ ಬಗ್ಗೆ ಸ್ಥಿರವಾದ ವಾಗ್ದಾನವಿದೆಯೋ ಆ ವಾಗ್ದತ್ತ ಪ್ರವಾದಿ ನಾನಾಗಿರುವೆನು. ನಾನು ಸುಳ್ಳುವಾದಿಯಲ್ಲ. ಆದ್ದರಿಂದ ನೀವು ಮೂರು ಸಾವಿರ ಬಿಲ್ಲುಗಾರರಿದ್ದರೂ ಮೂವತ್ತು ಸಾವಿರ ಬಿಲ್ಲುಗಾರರಿದ್ದರೂ ನನಗೆ ಅದರ ಪರಿವೆಯಿಲ್ಲ.

ಹಝ್ರತ್ ಪೈಗಂಬರ್(ಸ)ರ ಆದೇಶ ಪ್ರಕಾರ ಹಝ್ರತ್ ಅಬ್ಬಾಸ್(ರ) ಮುಸ್ಲಿಮರಿಗೆ ಹೀಗೆ ಕರೆನೀಡಿದರು. ಎಲೈ ಸೂರಃ ಬಖರಃದ ಸಹಾಬಿಯರೇ, ಎಲೈ ಹುದೈಬಿಯದ ದಿನ ಮರದ ಕೆಳಗೆ ಬೈಅತ್ ಮಾಡಿರುವರೇ, ಅಲ್ಲಾಹನ ಪ್ರವಾದಿ ನಿಮ್ಮನ್ನು ಕರೆಯುತ್ತಿದ್ದಾರೆ. ಸಹಾಬಿಯೊಬ್ಬರು ಹೇಳುತ್ತಾರೆ: ನವ ಮುಸ್ಲಿಮರ ಅಂಜುಬುರುಕತನ ಕಾರಣದಿಂದ ನಮ್ಮ ಸವಾರಿಗಳು ಕೂಡ ಓಡಿಹೋಗಿದ್ದುವು. ಆದರೆ ಈ ಶಬ್ದ ನನ್ನ ಕಿವಿಗೆ ಮುಟ್ಟಿದಾಗ ನಾನು ಜೀವಂತನಲ್ಲ, ಬದಲಾಗಿ ಮೃತಶರೀರನಾಗಿರುವೆನು ಎಂದು ನಾನು ಭಾವಿಸಿಕೊಂಡೆನು ಮತ್ತು ಇಸ್ರಾಫೀಲಿನ ಕಹಳೆ ಸುತ್ತಮುತ್ತ ಮೊಳಗುತ್ತಿದೆ ಎಂದು ತೋರುತ್ತಿತ್ತು. ನಾನು ನನ್ನ ಸವಾರಿಯನ್ನು ತಿರುಗಿಸಲು ಬಯಸಿದ್ದೆ. ಆದರೆ ಅದು ಹೆದರಿಕೊಂಡಿತ್ತು. ಆಗ ನಾನು ಮತ್ತು ನನ್ನ ಅನೇಕ ಸಂಗಡಿಗರು ಒಂಟೆಗಳ ಮೇಲಿಂದ ಜಿಗಿದೆವು. ಕೆಲವರು ಒಂಟೆಗಳ ಕೊರಳನ್ನು ಕಡಿದುಹಾಕಿದರು ಮತ್ತು ಹಝ್ರತ್ ಪೈಗಂಬರ್(ಸ)ರ ಕಡೆಗೆ ಓಡಲು ಶುರುಮಾಡಿದರು.

ಹಝ್ರತ್ ಅಬೂಖತ್ತಾದ ವರದಿ ಮಾಡುತ್ತಾರೆ: ಹುನೈನ್ ಯುದ್ಧದ ನಂತರ ಹಝ್ರತ್ ಪೈಗಂಬರ್(ಸ) ಹೇಳಿದರು: ಯಾವನೇ ವ್ಯಕ್ತಿ ತಾನು ವಧಿಸಿದ ವ್ಯಕ್ತಿಯ ಬಗ್ಗೆ ಅದಕ್ಕೆ ಪುರಾವೆಯನ್ನು ನೀಡಿದರೆ, ಕೊಲ್ಲಲ್ಪಟ್ಟ ವ್ಯಕ್ತಿಯ ಸಾಮಾನುಗಳು ಕೊಂದವನಿಗೆ ಲಭಿಸುವುದು. ನಾನು ಕೊಂದ ಓರ್ವ ವ್ಯಕ್ತಿಯ ಘಟನೆಯನ್ನು ಹಝ್ರತ್ ಪೈಗಂಬರ್(ಸ)ರೊಡನೆ ನಾನು ಹೇಳಿದೆ. ಹಝ್ರತ್ ಪೈಗಂಬರ್(ಸ)ರ ಜೊತೆಗೆ ಕುಳಿತುಕೊಂಡಿದ್ದ ಒಬ್ಬ ವ್ಯಕ್ತಿ ಹೇಳಿದನು: ಆ ಕೊಲ್ಲಲ್ಪಟ್ಟ ವ್ಯಕ್ತಿಯ ಆಯುಧಗಳು ನನ್ನ ಬಳಿಯಿದೆ. ನನ್ನ ಬಳಿಯಲ್ಲಿರುವ ಆ ಸಾಮಾನುಗಳು ನನ್ನ ಬಳಿಯಲ್ಲೇ ಇರಲಿ. ಅವರಿಗೆ ಬೇರೇನಾದರೂ ಕೊಡಿರಿ. ಹಝ್ರತ್ ಅಬೂಬಕರ್(ರ) ಅಲ್ಲಿ ಕುಳಿತುಕೊಂಡಿದ್ದರು. ಅವರು ಹೇಳಿದರು: ಅದು ಸಾಧ್ಯವಿಲ್ಲ. ಹಝ್ರತ್ ಪೈಗಂಬರ್(ಸ) ಖುರೈಶಿನ ಒಬ್ಬ ಅಂಜುಬುರುಕನಿಗೆ ಸಾಮಾನುಗಳನ್ನು ಕೊಡಿಸಿ, ಅಲ್ಲಾಹನ ಮತ್ತು ಅಲ್ಲಾಹನ ಪ್ರವಾದಿಯ ಪರವಾಗಿ ಯುದ್ಧ ಮಾಡಿದ ಅಲ್ಲಾಹನ ಸಿಂಹಗಳಲ್ಲಿ ಒಂದು ಸಿಂಹಕ್ಕೆ ಏನೂ ಕೊಡದೇ ಇರಲು ಖಂಡಿತ ಸಾಧ್ಯವಲ್ಲ. ಹಝ್ರತ್ ಅಬೂಖತ್ತಾದ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಎದ್ದುನಿಂತರು ಮತ್ತು ಆ ಸಾಮಾನುಗಳನ್ನು ನನಗೆ ಕೊಡಿಸಿದರು.

ತಾಯಿಫ್ ಯುದ್ಧ ಹಿಜರೀ 8ರ ಶವ್ವಾಲ್‌ನಲ್ಲಿ ನಡೆಯಿತು. ಹಝ್ರತ್ ಪೈಗಂಬರ್(ಸ) ತಾಯಿಫಿಗೆ ಮುತ್ತಿಗೆ ಹಾಕಿದರು. ವಿವಿಧ ವರದಿಗಳ ಪ್ರಕಾರ ಈ ಮುತ್ತಿಗೆಯು 10 ರಾತ್ರಿಗಳಿಂದ 40 ರಾತ್ರಿಗಳ ವರೆಗೆ ಇತ್ತು ಎಂದು ಪ್ರಸ್ತಾಪವಿದೆ. ಈ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಒಂದು ಕನಸನ್ನು ಕಂಡರು. ಹಝ್ರತ್ ಪೈಗಂಬರ್(ಸ)ರಿಗೆ ಅನಿಸುತ್ತಿದ್ದ ಅದೇ ವ್ಯಾಖ್ಯಾನವನ್ನು ಆ ಕನಸಿಗೆ ಹಝ್ರತ್ ಅಬೂಬಕರ್(ರ) ನೀಡಿದರು.

ತಬೂಕ್ ಯುದ್ಧ ಹಿಜರೀ 9, ರಜಬಿನಲ್ಲಿ ನಡೆಯಿತು. ಈ ಯುದ್ಧದ ವೇಳೆ ಹಝ್ರತ್ ಅಬೂಬಕರ್(ರ) 4 ಸಾವಿರ ದಿರ್ಹಂ ಬೆಲೆಯ ತನ್ನ ಸಂಪೂರ್ಣ ಸಂಪತ್ತನ್ನು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಸಮರ್ಪಿಸಿದ್ದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ)ರೊಡನೆ ಕೇಳಿದರು: ನಿಮ್ಮ ಮನೆಯವರಿಗಾಗಿ ಏನಾದರೂ ಬಿಟ್ಟುಬಂದಿದ್ದೀರಾ? ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ಮನೆಯವರಿಗೆ ಅಲ್ಲಾಹ್ ಮತ್ತು ಅವನ ಪ್ರವಾದಿಯನ್ನು ಬಿಟ್ಟುಬಂದಿದ್ದೇನೆ. ಝೈದ್ ಬಿನ್ ಅಸ್ಲಮ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಹೀಗೆ ಹೇಳುವುದನ್ನು ನಾನು ಆಲಿಸಿದೆ. ಅವರು ಹೇಳಿದರು: ನಾನು ನನ್ನ ಸಂಪತ್ತಿನ ಅರ್ಧದಷ್ಟನ್ನು ಕೊಂಡುಬಂದೆನು. ಹಝ್ರತ್ ಅಬೂಬಕರ್(ರ)ರಿಗಿಂತ ಮಿಗಿಲಾಗಲು ಎಂದಾದರೂ ಸಾಧ್ಯವಿದ್ದರೆ, ಅದು ಇಂದಾಗಿರುವುದು ಎಂದು ನಾನು ಭಾವಿಸಿದೆ. ಆದರೆ ಹಝ್ರತ್ ಅಬೂಬಕರ್(ರ) ಅವರ ಬಳಿಯಿದ್ದ ಎಲ್ಲವನ್ನು ಕೊಂಡುಬಂದು ಹಾಜರಾದರು. ಹಝ್ರತ್ ಉಮರ್(ರ) ಹೇಳುತ್ತಾರೆ: ಅಲ್ಲಾಹನಾಣೆ, ನಾನು ಅಬೂಬಕರ್(ರ)ಗಿಂತ ಯಾವುದೇ ಸಂಗತಿಯಲ್ಲಿ ಎಂದಿಗೂ ಮಿಗಿಲಾಗಲು ಸಾಧ್ಯವಲ್ಲ.

ಹಝ್ರತ್ ಮಸೀಹ್ ಮೌಊದ್(ಅ) ಈ ಘಟನೆಯನ್ನು ಪ್ರಸ್ತಾಪಿಸುತ್ತಾ ಬೈಅತ್ ಮಾಡಿದವರ ಕುರಿತು ಹೇಳುತ್ತಾರೆ: ಕೆಲವರು ಬೈಅತ್ ಮಾಡುತ್ತಾರೆ, ನಾವು ದೀನಿಗೆ ಲೌಕಿಕತೆಗಿಂತ ಪ್ರಾಮುಖ್ಯತೆಯನ್ನು ನೀಡುವೆವು ಎಂದು ಪ್ರತಿಜ್ಞೆ ಕೂಡ ಮಾಡುತ್ತಾರೆ. ಆದರೆ ಸಹಾಯದ ಆವಶ್ಯಕತೆಯಿರುವ ಸಮಯದಲ್ಲಿ ತಮ್ಮ ಜೇಬುಗಳನ್ನು ಅದುಮಿ ಹಿಡಿದಿರುತ್ತಾರೆ. ಲೌಕಿಕತೆಯೊಂದಿಗೆ ಇಂತಹ ಪ್ರೀತಿ ಇರಿಸಿದರೆ, ಧಾರ್ಮಿಕ ಉದ್ದೇಶ ಗಳಿಸಲು ಸಾಧ್ಯವೇ? ಇಂತಹ ಜನರು ಯಾವುದೇ ರೀತಿಯಲ್ಲಿ ಪ್ರಯೋಜನಕಾರಿಯಾಗಲು ಸಾಧ್ಯವೇ? ಖಂಡಿತವಾಗಿಯೂ ಇಲ್ಲ. ನೀವು ಪ್ರೀತಿಸುವ ಸಂಪತ್ತನ್ನು ಖರ್ಚು ಮಾಡುವ ವರೆಗೂ ನಿಮ್ಮ ಸತ್ಕರ್ಮಗಳು ಸತ್ಕರ್ಮಗಳಲ್ಲ ಎಂದು ಅಲ್ಲಾಹನು ಹೇಳುತ್ತಾನೆ.

ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ) ವರದಿ ಮಾಡುತ್ತಾರೆ: ತಬೂಕಿನಲ್ಲಿ ಒಂದು ರಾತ್ರಿ ನಾನು ಹಝ್ರತ್ ಪೈಗಂಬರ್(ಸ), ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ)ರನ್ನು ಕಂಡೆನು. ಮೂವರು ಸೇರಿ ಹಝ್ರತ್ ಅಬ್ದುಲ್ಲಾಹ್ ಧುಲ್‌ಬಜಾದೈನ್(ರ)ರ ಮಯ್ಯತನ್ನು ಖಬರಿನಲ್ಲಿ

ದಫನ್ ಮಾಡುತ್ತಿದ್ದರು. ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್ಊದ್ ಹೇಳುತ್ತಾರೆ: ಆ ಮಯ್ಯತ್ ನನ್ನದಾಗಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ನಾನು ಆಶಿಸಿದೆ.

ಹಝ್ರತ್ ಪೈಗಂಬರ್(ಸ) ಹಿಜರೀ 9ರಲ್ಲಿ ತಬೂಕಿನಿಂದ ಮರಳಿ ಬರುವಾಗ ಹಜ್ಜ್ ಮಾಡಲು ಬಯಸಿದರು. ಆದರೆ ಹಜ್ಜಿನ ವೇಳೆ ಬಹುದೇವಾರಾಧಕರು ಶಿರ್ಕಿನ ಪದಗಳನ್ನು ಉಪಯೋಗಿಸುತ್ತಾರೆ ಮತ್ತು ಬರೀ ಮೈಯಲ್ಲಿ ತವಾಫ್ ಮಾಡುತ್ತಾರೆ ಎಂದು ಹಝ್ರತ್ ಪೈಗಂಬರ್(ಸ)ರೊಡನೆ ಹೇಳಲಾದಾಗ ಹಝ್ರತ್ ಪೈಗಂಬರ್(ಸ) ಆ ವರ್ಷ ಹಜ್ಜ್ ಮಾಡುವ ನಿರ್ಧಾರವನ್ನು ಕೈಬಿಟ್ಟರು ಮತ್ತು ಹಝ್ರತ್ ಅಬೂಬಕರ್(ರ)ರನ್ನು ಹಜ್ಜಿನ ಅಮೀರ್‌ರನ್ನಾಗಿ ನಿಶ್ಚಯಿಸಿದರು. ಹಝ್ರತ್ ಅಬೂಬಕರ್(ರ) 300 ಸಹಾಬಿಯರ ಜೊತೆಗೆ ಹಜ್ಜಿಗಾಗಿ ಹೊರಟರು. ಹಝ್ರತ್ ಪೈಗಂಬರ್(ಸ) ಖುರ್ಬಾನಿಯ 20 ಜಾನುವಾರುಗಳನ್ನು ಕಳುಹಿಸಿದರು. ಹಝ್ರತ್ ಅಬೂಬಕರ್(ರ) ಹೊರಟ ನಂತರ ಹಝ್ರತ್ ಪೈಗಂಬರ್(ಸ)ರ ಮೇಲೆ ಸೂರಾ ತೌಬಃ ಅವತೀರ್ಣವಾಯಿತು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿ(ರ)ರನ್ನು ಕರೆದು ಅವರೊಡನೆ ಹೀಗೆ ಹೇಳಿದರು: ಸೂರಃ ತೌಬದ ಆರಂಭದ ವಚನಗಳನ್ನು ತೆಗೆದುಕೊಂಡು ಹೋಗು ಮತ್ತು ಖುರ್ಬಾನಿಯ ದಿವಸ ಮಿನಾದಲ್ಲಿ ಎಲ್ಲರೂ ಒಟ್ಟುಸೇರುವಾಗ ಹೀಗೆ ಘೋಷಿಸು: ಸ್ವರ್ಗದಲ್ಲಿ ಯಾವನೇ ಸತ್ಯನಿಷೇಧಿ ಪ್ರವೇಶಿಸಲಾರನು, ಈ ವರ್ಷದ ನಂತರ ಯಾವನೇ ಬಹುದೇವಾರಾಧಕನಿಗೆ ಹಜ್ಜ್ ಮಾಡುವ ಅನುಮತಿ ಇಲ್ಲ. ಅದೇ ರೀತಿಯಲ್ಲಿ ನಗ್ನವಾಗಿ ಕಅ್‌ಬ ಭವನದ ತವಾಫ್ ಮಾಡಲು ಸಹ ಯಾರಿಗೂ ಅನುಮತಿಯಿಲ್ಲ. ಯಾರೊಡನೆಯಾದರೂ ಹಝ್ರತ್ ಪೈಗಂಬರ್(ಸ) ಯಾವುದಾದರೂ ಒಪ್ಪಂದ ಮಾಡಿರುವರಾದರೆ, ಅದರ ಕಾಲಾವಧಿಯನ್ನು ಪೂರ್ತಿಗೊಳಿಸಲಾಗುವುದು.

ಹಝ್ರತ್ ಅಲಿ(ರ) ಹಝ್ರತ್ ಅಬೂಬಕರ್(ರ)ರನ್ನು ಭೇಟಿಯಾದಾಗ, ಹಝ್ರತ್ ಅಬೂಬಕರ್(ರ) ಕೇಳಿದರು: ನಿಮ್ಮನ್ನು ಅಮೀರ್ ಆಗಿ ನೇಮಿಸಲಾಗಿದೆಯೋ ಯಾ ನೀವು ನನ್ನ ಅಧೀನದಲ್ಲಿ ಇರುತ್ತೀರೋ? ಇದು ಹಝ್ರತ್ ಅಬೂಬಕರ್(ರ)ರ ಅಪಾರವಾದ ವಿನಯವಂತಿಕೆಯಾಗಿದೆ. ಹಝ್ರತ್ ಅಲಿ(ರ) ಹೇಳಿದರು: ನಾನು ನಿಮ್ಮ ಅಧೀನದಲ್ಲಿರುವೆನು.

ಒಂದು ವರದಿಯ ಪ್ರಕಾರ ಹಝ್ರತ್ ಅಬೂಬಕರ್(ರ) ಅರಫದ ಮೈದಾನದಲ್ಲಿ ಜನರನ್ನು ಸಂಬೋಧಿಸಿ ಮಾತನಾಡಿದರು. ಅನಂತರ ಹಝ್ರತ್ ಅಲಿ(ರ)ರೊಡನೆ ಹೇಳಿದರು: ಹಝ್ರತ್ ಪೈಗಂಬರ್(ಸ)ರ ಸಂದೇಶವನ್ನು ತಲುಪಿಸು. ಆಗ ಹಝ್ರತ್ ಅಲಿ(ರ) ಸೂರ ತೌಬಃದ ನಲ್ವತ್ತು ವಚನಗಳನ್ನು ಓದಿ ಹೇಳಿದರು.

(ಹಝ್ರತ್ ಅಬೂಬಕರ್(ರ)ರ ಪ್ರಸ್ತಾಪ ಮುಂದುವರೆಯುವುದು ಎಂದು ಹೇಳಿದ ನಂತರ ಹುಝೂರ್ ಅಲ್‌ಫಝ್ಲ್ ರಬ್ವದ ಅಸಿಸ್ಟೆಂಟ್ ಎಡಿಟರ್ ಆಗಿದ್ದ ಸನ್ಮಾನ್ಯ ಶೇಖ್ ಖುರ್‌ಶೀದ್ ಅಹ್ಮದ್ ಸಾಹಿಬ್‌ರ ಪತ್ನಿಯಾದ ದಿವಂಗತ ಅಮತುಲ್ಲತೀಫ್ ಖುರ್‌ಶೀದ್ ಸಾಹಿಬರ ಬಗ್ಗೆ ಪ್ರಸ್ತಾಪಿಸಿದರು ಮತ್ತು ಅವರ ಜನಾಝ ಗ಼ಾಇಬ್ ನಿರ್ವಹಿಸುವುದಾಗಿ ಹೇಳಿದರು. ದಿವಂಗತರ ಮಗ್‌ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ಹುಝೂರ್ ದುಆ ಮಾಡಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْىِ يَعِظُكُمْ لَعَلَّكُمْ تَذَكَّرُوْنَ ○ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis***[atba]

*At, Masjid Mubarak, Islamabad, Tilford, UK, On 11-02-2022*


**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon